ಸಾಕ್ಷಿಗೆ ದಿನಾಂಕಃ **14.02.2020** ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.

**ವಾದಿಯ ಮುಖ್ಯವಿಚಾರಣೆ ಪಿಡಬ್ಲೂ 1 ಆಗಿ ಶ್ರೀ.ಹೆಚ್.ಜೆ. ವಾದಿ ಪರ ವಕೀಲರಿಂದಃ-**

ನಾನು ನನ್ನ ಸಾಕ್ಷಿಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನ್ನ ನಂಬಿಕೆ, ಮಾಹಿತಿಗೆ ಸತ್ಯವಾಗಿದ್ದು, ಅದು ನನ್ನ ಹೇಳಿಕೆಯಂತೆ ಬರೆಯಲ್ಪಟ್ಟಿದೆ.

ಪ್ರತಿವಾದಿಗಳು ನನಗೆ ಬರೆದುಕೊಟ್ಟ ದಿಃ**09.03.2018** ರ ನೋಂದಾಯಿತ ಕ್ರಯ ಪತ್ರವನ್ನು ನಿ ಪಿ **1** ಎಂದು, ಅದರಲ್ಲಿನ ತನ್ನ ಸಹಿ ಮತ್ತು ಪ್ರತಿವಾದಿಯ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿ ಪಿ **1 (ಎ)** ಮತ್ತು ನಿ ಪಿ **1 (ಬಿ)** ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ ರಾಮಣ್ಣ, ವೆಂಕಟಸ್ವಾಮಿ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ಮಂಜುನಾಥ ರವರು ಪತ್ರ ಬರವಣಿಗೆ ಮಾಡಿದ್ದಾರೆ. ದಿಃ**31.10.2018** ರ ನೋಟಿಸ್ ಪ್ರತಿಯನ್ನು ನಿ ಪಿ **2** ಎಂದು, ಅಂಚೆ ರಶೀದಿಯನ್ನು ನಿ ಪಿ **3** ಎಂದು, ಅಂಚೆ ಸ್ವೀಕೃತಿ ಪತ್ರವನ್ನು ನಿ ಪಿ **4** ಎಂದು, **4** ಗಣಕೀಕೃತ ಆರ್.ಟಿ.ಸಿ. ಗಳನ್ನು ಕ್ರಮವಾಗಿ ನಿ ಪಿ **5** ರಿಂದ **8** ಎಂದು ಗುರುತಿಸಲಾಯಿತು.

**ಪ್ರತಿವಾದಿಯರು ಯಾವುದೇ ಲಿಖಿತ ತಕರಾರು ಸಲ್ಲಿಸಿರುವುದಿಲ್ಲ ಆದುದ್ದರಿಂದ ಪಾಟೀ ಸವಾಲು ಏನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಎರಡನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಕನಕಪುರ

ಓ ಹೇ ಕೇ ಸರಿ ಇದೆ,